IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಗುಂಡಪ್ಪನವರ ಆದಿಪುರಾಣ ಸಂಗ್ರಹದ ಗ್ರಂಥ ಸಂಪಾದನಾ ವೈಶಿಷ್ಟ್ಯ

– ಕವಿತ ಎಸ್.

ಕನ್ನಡದ ಕಾವ್ಯಗಳು ಪ್ರಾರಂಭದಲ್ಲಿ ಸಮಗ್ರವಾಗಿ ಪ್ರಕಟವಾಗತೊಡಗಿದವು ಅನಂತರ ಕಾವ್ಯ ಭಾಗಗಳ ಸಂಗ್ರಹವಾಯಿತು. ಮೊದಲ ಹಂತದಲ್ಲಿ ಪ್ರಾಕ್ಕಾವ್ಯ ಮಾಲಿಕೆ, ಪದ್ಯಸಾರಗಳು ಬಂದವು. ನಂತರ ಪೂರ್ಣಕಾವ್ಯಗಳ ಸಂಗ್ರಹ ಪ್ರಾಂಭವಾಯಿತು. 'ಗದಾಯುದ್ಧ', 'ಆದಿಪುರಾಣ', 'ಯಶೋಧರ ಚರಿತೆ', 'ಪಂಪಭಾರತ' ಈ ಗುಂಪಿಗೆ ಸೇರಿದಂತಹವುಗಳು. ಈ ಕಾವ್ಯ ಪರಂಪರೆ ದೇಶೀಯರ ಸಂಪಾದಕತ್ವದಲ್ಲಿ ಪಠ್ಯಪುಸ್ತಕಗಳ ಸಂಗ್ರಹಗಳಲ್ಲಿ ಕಂಡುಬಂದಿತು. ಈ ಸಮಯದಲ್ಲಿ ಪಠ್ಯಕಾವ್ಯ ಭಾಗಗಳು, ಹಳಗನ್ನಡ, ನಡುಗನ್ನಡ, ಹೊಸಗನ್ನಡ ರೂಪವನ್ನು ಆಯ್ಕೆಯಾದವು. ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭವಾದ ಮೇಲೆ ಎಂ.ಎ. ವಿದ್ಯಾರ್ಥಿಗಳಿಗೆ ಪೂರ್ಣಕಾವ್ಯವನ್ನು, ಸಂಕ್ಷಿಪ್ತ ರೂಪದಲ್ಲಿ ಸಂಗ್ರಹಿಸಿದ ಕಾವ್ಯಗಳು ಅರ್ಥಾತ್, ಕಾವ್ಯ ಸಂಗ್ರಹಗಳು ಬರತೊಡಗಿದವು. ಇವುಗಳಲ್ಲಿ ಮೂರು ವಿಧಗಳನ್ನು ಕಾಣಬಹುದು.

1. ಪೂರ್ಣಕಾವ್ಯಗಳ ಬಹುಭಾಗ ಸಂಗ್ರಹಿಸಿ ಉಳಿದ ಭಾಗವನ್ನು ಅನುಬಂಧದಲ್ಲಿ ಕೊಡುವುದು, ಕಾವ್ಯಭಾಗಗಳನ್ನು ಸಂಗ್ರಹ ಮಾಡುವ ಒಂದು ವಿಧಾನ. ಉದಾ.ಕನ್ನಡ ಕಾವ್ಯಾಂಜಲಿ, ಕಾವ್ಯಲಹರಿ ಚರಿತ್ರೆ ಇತ್ಯಾದಿ.

2. ಕಾವ್ಯಗಳನ್ನೇ (ಕಾವ್ಯ ಸಂಗ್ರಹ) ಸಂಕ್ಷಿಪ್ತಗೊಳಿಸುವ ಇನ್ನೊಂದು ವಿಧಾನ.

ಈ ರೀತಿಯ ಸಂಗ್ರಹಗೊಂಡ ಕಾವ್ಯಗಳಲ್ಲಿ ಎಲ್. ಗುಂಡಪ್ಪರವರು ಸಂಪಾದಿಸಿರುವ ಆದಿಪುರಾಣ ಸಂಗ್ರಹ ಒಂದು. ಈ ಗುಂಪಿಗೆ ಸೇರಿರುವ ಕಾವ್ಯಗಳು 'ಪಂಪರಾಮಾಯಣ', 'ಗದಾಯುದ್ಧ' ಮೊದಲಾದ ಪುಸ್ತಕಗಳು ಬಂದವು. ಈ ರೀತಿ ಕೃತಿಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕಾವ್ಯ ಸಂಗ್ರಹಗಳು ಇತಿಹಾಸ ನಿರ್ಮಿಸಿದವು.

ವಿದ್ಯಾರ್ಥಿಗಳಿಗೆ ಬೋಧಿಸಲು ಅನುಕೂಲವಾಗಬೇಕೆಂದು ಬಿ.ಎಂ.ಶ್ರೀಯವರ ನೇತೃತ್ವದಲ್ಲಿ ಈ ಸಂಗ್ರಹಗಳು ಪ್ರಾರಂಭವಾಯಿತು. ಇದರಲ್ಲಿ ಮೊದಲ ಬಾರಿಗೆ ಕಾವ್ಯ ಸಂಗ್ರಹ ರೂಪುಗೊಂಡಿದ್ದು ಎ.ಆರ್. ಕೃಷ್ಣಶಾಸ್ತ್ರಿ ಅವರ ಹರಿಶ್ಚಂದ್ರ ಕಾವ್ಯ. ಇದು 1931ರಲ್ಲಿ ಪ್ರಕಟವಾಯಿತು. ಇದು ಹಳಗನ್ನಡ ಕಾವ್ಯ ಸಂಗ್ರಹಗಳ ಇತಿಹಾಸದಲ್ಲೇ ಮೊದಲನೆಯದು. ನಂತರ 1933ರಲ್ಲಿ ಟಿ.ಎಸ್. ವೆಂಕಣ್ಣಯ್ಯನವರ 'ಕರ್ಣಾಟಕ ಕಾದಂಬರಿ' ಮೂರನೆಯದಾಗಿ 1934ರಲ್ಲಿ ಪ್ರಕಟವಾದ ನಡುಗನ್ನಡದ ಎಂ.ಆರ್. ಶ್ರೀಕಂಠಯ್ಯನವರ 'ಪ್ರಭುಲಿಂಗಲೀಲೆ' ಸಂಗ್ರಹ.[1]

ಹೀಗೆ ಕಾವ್ಯ ಸಂಗ್ರಹಗಳು ಸಾಲು ಸಾಲಾಗಿ ಹೊರಬರಲು ತೊಡಗಿದವು. ಒಂದು ಕಡೆ ಪ್ರಾಚೀನ ಸಾಹಿತ್ಯವನ್ನು ಅಭ್ಯಾಸ ಮಾಡುವವರ ಸಂಖ್ಯೆ ಕ್ಷೀಣಿಸುತ್ತಿರುವುದನ್ನು ಮನಗಂಡ ಆಚಾರ್ಯ ಬಿ.ಎಂ.ಶ್ರೀಯವರು 'ಪ್ರಭುಲಿಂಗಲೀಲೆ' ಸಂಗ್ರಹದ ಮುನ್ನುಡಿಯಲ್ಲಿ ಒಬ್ಬ ಸಂಗ್ರಾಹಕ ಸಂಪಾದಕನಿಗೆ ಇರಬೇಕಾದ ಅರ್ಹತೆಯನ್ನು ಈ ರೀತಿ ಹೇಳಿ ಸ್ಪಷ್ಟಪಡಿಸಿದ್ದಾರೆ. "ಒಂದು ಕಾವ್ಯದ ಸೊಬಗನ್ನು ಒಬ್ಬ ಕವಿಯ ಕವಿತಾಶಕ್ತಿಯನ್ನು ತಿಳಿಯಬೇಕಾದರೆ ಕಾವ್ಯವನ್ನು ಸಂಪೂರ್ಣವಾಗಿ ಓದಬೇಕು. ಇಲ್ಲ ಉತ್ತಮ ಭಾಗಗಳನ್ನಾದರೂ ನೋಡಬೇಕು. ಈ ಸಮಷ್ಠಿದೃಷ್ಟಿ ಸಾಧ್ಯವಾಗುವಂತೆ ಪಾಠಕ್ಕೆ ಪ್ರಮಾಣ ಅತಿಮೀರದಂತೆ ಕಾವ್ಯಗಳನ್ನು ಅದರದರ ಸ್ವಭಾವಕ್ಕೆ ಉಚಿತವಾಗಿ ಸಂಗ್ರಹಿಸಿದರೆ ವಿದ್ಯಾರ್ಥಿಗಳಿಗೂ ಜನಸಾಮಾನ್ಯಕ್ಕೂ ಹಿತಕರವೂ ಪ್ರಯೋಜನಕರವೂ ಆಗಬಹುದೆಂಬ ನಂಬಿಕೆಯಿಂದ ಈ ಸಂಗ್ರಹವನ್ನು ಮಾಡುತ್ತದೆ.

[1] ಗ್ರಂಥಸಂಪಾದನೆ ಕೆಲವು ಅಧ್ಯಯನ, ವೈ.ಸಿ.ಭಾನುಮತಿ ಪುಟ 85

ಇದರಲ್ಲಿ ಮುಖ್ಯ ಗಮನ ಕಥಾಸರಣಿ ಕೆಡಬಾರದು. ಒಟ್ಟು ಕಥೆಯ ಸ್ವಾರಸ್ಯಕ್ಕೆ ಪಾತ್ರನಿರೂಪಣಕ್ಕೆ ಭಂಗ ಬರಬಾರದು. ಅವಶ್ಯವಾದ ವರ್ಣನೆಯ ಮತ್ತು ವಿವರಣೆಯ ಸಾರ ಬಿಟ್ಟು ಹೋಗಬಾರದು. ಎಲ್ಲಕ್ಕಿಂತ ಪ್ರಧಾನವಾದದ್ದು ಕವಿ ವ್ಯಕ್ತಿತ್ವಕ್ಕೆ ಆತನ ವಿಶೇಷ ಪ್ರತಿಭೆಗೆ ಲೋಪ ಬರಕೂಡದು, ಇಷ್ಟನ್ನೂ ಸಾಧಿಸುವುದು ಸಂಗ್ರಹಕಾರನ ಕರ್ತವ್ಯ" ಎಂದಿದ್ದಾರೆ.

ಇಂತಹ ಉನ್ನತ ಆದರ್ಶವನ್ನಿಟ್ಟುಕೊಂಡು ಬಂದಂತಹ ಸಂಗ್ರಹ ಎಲ್. ಗುಂಡಪ್ಪನವರ 'ಆದಿಪುರಾಣ ಸಂಗ್ರಹ' ಈ ಯೋಜನೆಗೆ ಬಿ.ಎಂ.ಶ್ರೀಯವರೇ ಇವರನ್ನು ನಿಯೋಜಿಸಿದರೆಂದರೆ ಇವರ ಸಾಮರ್ಥ್ಯದ ಬಗ್ಗೆ ಹೇಳಬೇಕಾಗಿಲ್ಲ.

ಎಲ್. ಗುಂಡಪ್ಪನವರು ವಿದ್ಯಾರ್ಥಿಯಾಗಿರುವಾಗಲೇ ಕೆಲವು ಸ್ವತಂತ್ರ್ಯ ಕೃತಿಗಳನ್ನು ಬರೆದಿದ್ದರು. ಕೆಲವು ಗ್ರಂಥಗಳನ್ನು ಅನುವಾದಿಸಿದ್ದರು, ಕೆಲವನ್ನು ಸ್ವಂತ ರಚಿಸಿದರು ಈ ಹಿನ್ನೆಲೆ ಅವರ ನೆರವಿಗೆ ಬಂದಿತು. 'ಆದಿಪುರಾಣ ಸಂಗ್ರಹ'ವನ್ನು ಸಂಪಾದನೆ ಮಾಡಬೇಕಾದರೆ ವಿದ್ವಾಂಸರಾದವರು ಮಾಡಿಕೊಳ್ಳುವ ಹಲವು ಸಿದ್ಧತೆಗಳನ್ನು ಸಂಗ್ರಹಕ್ರಮ ವಿಧಾನವನ್ನು ನಾವು ಕಾಣಬಹುದು. ಇವರ ಸಂಗ್ರಹಗಳಲ್ಲಿ ಎರಡು ರೀತಿ ವಿಧಾನವಿದೆ.[2] ಒಂದು ಶಿಷ್ಟ ಸಾಹಿತ್ಯಗಳ ಗ್ರಂಥ ಸಂಪಾದನೆ, ಇನ್ನೊಂದು ಜಾನಪದ ಗ್ರಂಥಗಳ ಸಂಪಾದನೆ. ಶಿಷ್ಟ ಸಾಹಿತ್ಯಕ್ಕೆ ಸಂಬಂಧಪಟ್ಟದ್ದರಲ್ಲಿ ಶಿಖರಪ್ರಾಯವಾದುದು ಎಂದರೆ 'ಆದಿಪುರಾಣ ಸಂಗ್ರಹ'. ಜನಪದ ಸಾಹಿತ್ಯ ಸಂಗ್ರಹಕ್ಕೆ ಇವರು ತಮ್ಮ ಸಹೋದರರಾದ ಮತಿಘಟ್ಟ ಕೃಷ್ಣಮೂರ್ತಿ ಅವರೊಡನೆ ಸಂಪಾದಿಸಿದ ನಾಡಪದಗಳು. ಎಲ್. ಗುಂಡಪ್ಪನವರು ಸಂಗ್ರಹಮಾಡಿರುವ ಆದಿಪುರಾಣದಲ್ಲಿ ಈ ಕೆಳಕಂಡ ವಿಧಾನಗಳನ್ನು ಕಾಣಬಹುದು.

ಅ. ಸಂಗ್ರಹವಿಧಾನ

1. ಮೂಲದ ಸಂಗ್ರಹ ರೀತಿ.

ಕಾವ್ಯ ಸಂಗ್ರಹಗಳಲ್ಲಿ ಜೈನ ಚಂಪೂ ಕಾವ್ಯ ಸಂಗ್ರಹವೇ ಬೇರೆ ವಿಧಾನ, ಷಟ್ಪದಿ ಸಾಂಗತ್ಯ ಕಾವ್ಯ ಸಂಗ್ರಹ ವಿಧಾನವೇ ಬೇರೆ. ಜೈನ ತೀರ್ಥಂಕರ ಕಾವ್ಯಗಳನ್ನು ಮೂಲ ಪುರಾಣಗಳ ಹಿನ್ನೆಲೆಯಲ್ಲಿ ಸಂಗ್ರಹ ಮಾಡಬೇಕು. ಮೂಲಕೃತಿಯನ್ನು ಓದಿದಾಗ ಆಗುವ ಅನುಭವ, ಪರಿಕಲ್ಪನೆ, ಆನಂದ, ಜ್ಞಾನಾನಂದ ಇವೆಲ್ಲವೂ ಸಂಗ್ರಹದಿಂದಲೂ ಆಗಬೇಕು. ಆದಿಪುರಾಣ ಸಂಗ್ರಹವನ್ನು ಓದಿದಾಗ ಈ ಪರಿಯ ಅನುಭವ ಆಗುತ್ತದೆ. ಆದ್ದರಿಂದ ಇದೊಂದು ಮಾದರಿ ಸಂಗ್ರಹವಾಗಿದೆ.

ಗುಂಡಪ್ಪನವರ ಗ್ರಂಥ ಸಂಪಾದನೆಯ ಪಾತ್ರ ಚಿತ್ರಣದಲ್ಲಿ ಧಕ್ಕೆ ಬಾರದಂತೆ ವರ್ಣನೆಗಳನ್ನು ತೀರ ಮಿತವಾಗಿ ಸಂಗ್ರಹಿಸಿದ್ದಾರೆ. ಬಿ.ಎಸ್. ಸಣ್ಣಯ್ಯ ಹೇಳುವಂತೆ "ಗುಂಡಪ್ಪನವರು ಆದಿಪುರಾಣದಂತಹ ದೀರ್ಘಕಾವ್ಯವೊಂದನ್ನು ಕಥೆಗೆ ಕುಂದುಂಟಾಗದಂತೆ ಸಂಗ್ರಹಿಸಿದ್ದಾರೆ"[3] ಎಂಬ ಮಾತು ಸಮಂಜಸವಾಗಿದೆ.

2. ಜೈನ ಧರ್ಮದ ಪರಿಚಯ

ಆದಿಪುರಾಣದ ಪರಿಷ್ಕರಣಗಳನ್ನು ಮಾಡಿದ ಸಂಪಾದಕರಾಗಲಿ, ಮೂಲವನ್ನು ಪ್ರಕಟಿಸಿದ ಸಂಪಾದಕರಾಗಲಿ ಎಲ್ಲರೂ ಕವಿಯ ಕಾಲ, ಕೃತಿಯ ವಸ್ತು, ಆಕರಗಳನ್ನು ಕುರಿತು ಚರ್ಚಿಸಿದ್ದರೂ ಕೃತಿಗೆ ಹಿನ್ನೆಲೆಯಾಗಿ ಜೈನಧರ್ಮದ ಮುಖ್ಯ ಲಕ್ಷಣಗಳನ್ನೆಲ್ಲ ಕೈಪಿಡಿಯಂತೆ ಸಮಗ್ರವಾಗಿ ಯಾರೂ ಪ್ರಸ್ತಾಪಿಸಿಲ್ಲ. ಆದರೆ ಎಲ್. ಗುಂಡಪ್ಪನವರು ಪ್ರತ್ಯೇಕ ಸಣ್ಣ ಗ್ರಂಥವಾಗುವ ಹಾಗೆ 100 ಪುಟಗಳಷ್ಟು ಜೈನಧರ್ಮದ ಪರಿಚಯವನ್ನು ನೀಡಿದ್ದಾರೆ. ಇದು ಕೇವಲ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ವಿದ್ವಾಂಸರಿಗೂ ಉಪಯೋಗವಾಗಿರುವುದು ವಿಶೇಷವಾಗಿದೆ. ಜೈನ ಧರ್ಮ ಸಾರವನ್ನು ಇಷ್ಟು ಸರಳವಾಗಿ ಸಾರವತ್ತಾಗಿ ಬೇರೆಯವರು ಸಂಗ್ರಹಿಸಿಲ್ಲ.

ಮೂಲ ಕಾವ್ಯದಲ್ಲಿರುವ ಭವಾವಳಿ ಮೊದಲಾದವು ಜೈನ ಧಾರ್ಮಿಕರಿಗೆ ಪ್ರಿಯವಾಗುತ್ತದೆ. ಆದರೆ ಸಾಮಾನ್ಯ ಓದುಗರಿಗೆ ಸ್ವಲ್ಪ ಕ್ಲಿಷ್ಟವಾಗುತ್ತದೆ. ಈ ಕ್ಲಿಷ್ಟಭಾಗವನ್ನು ಸಂಗ್ರಹದಲ್ಲಿ ಗುಂಡಪ್ಪನವರು ಸರಳಗೊಳಿಸಿದ್ದಾರೆ. ಹೀಗೆ ಇವರ ಎಲ್ಲ ಸಂಪಾದಿತ ಗ್ರಂಥಗಳಲ್ಲಿ ಮುನ್ನುಡಿಯದೇ ಒಂದು ಲೋಕ. ಗುಂಡಪ್ಪನವರ ಆಳವಾದ ಜೈನಧರ್ಮ ಪರಿಚಯಕ್ಕೆ, ಪಾಂಡಿತ್ಯಕ್ಕೆ ಈ ಪೀಠಿಕೆ ನಿದರ್ಶನವಾಗಿದೆ.

[2] ಪ್ರೊ.. ಡಿ. ಲಿಂಗಯ್ಯನವರ ಲೇಖನ, ಆದಿಪುರಾಣ ಸಂಗ್ರಹ ವಿಧಾನ ಕುರಿತು (ಅಪ್ರಕಟಿತ)

[3] ಪ್ರಾಚೀನ ಕನ್ನಡ ಗ್ರಂಥಸಂಪಾದನೆ, ಬಿ.ಎಸ್. ಸಣ್ಣಯ್ಯ, ಪುಟ.14

3 ವಿಸ್ತೃತ ಪೀಠಿಕಾ ಭಾಗ

ಕಥಾಸಾರ, ಪಾತ್ರಚಿತ್ರಣ, ತೀರ್ಥಂಕರ ಭವಾವಳಿಗಳ ವಿವರಣೆ ಜೊತೆಗೆ ಪಂಪನ ಕಾಲ, ಕೃತಿಗಳ ಬಗ್ಗೆ ಅವನು ಬಳಸಿದ ಛಂದಸ್ಸಿನ ಲಕ್ಷಣಗಳನ್ನು ಕೊಟ್ಟಿದ್ದಾರೆ ಮತ್ತು ಇಂಗ್ಲೀಷ್ ಗ್ರಂಥ, ಕನ್ನಡ ಗ್ರಂಥ, ಸಂಸ್ಕೃತ ಗ್ರಂಥಗಳ ಆಕರಗಳನ್ನು ಕೊಟ್ಟಿದ್ದಾರೆ. ಗುಂಡಪ್ಪನವರ ತೌಲನಿಕ ಅಧ್ಯಯನಕ್ಕೆ ಈ ಗ್ರಂಥಪಟ್ಟಿ ಸಾಕ್ಷಿಯಾಗಿದೆ.

(ಅ) ಕ್ಲಿಷ್ಟ, ಸಂದಿಗ್ಧ ಪದಗಳಿಗೆ ಟಿಪ್ಪಣಿ

ಕ್ಲಿಷ್ಟಕರವಾದ ಪದಗಳಿಗೆ ಸಂಬಂಧಪಟ್ಟ ಅರ್ಥಗಳನ್ನು ಬಹಳ ವಿದ್ವತ್ಪೂರ್ಣವಾಗಿ ನೀಡಿದ್ದಾರೆ. ಪಾರಿಭಾಷಿಕ ಪದಗಳ ಅರ್ಥವನ್ನು ಧರ್ಮದ ವಿವರಗಳೊಡನೆ ತಿಳಿಸಿದ್ದಾರೆ.

ಮುಗುಳ್ ಪದವನ್ನು ಬಳಸುವುದರ ಬಗ್ಗೆ ವಿಶೇಷ ಟಿಪ್ಪಣಿ ಕೊಟ್ಟಿದ್ದಾರೆ. ಱ ೞ ಮತ್ತು ಕುಳದ ಬಗ್ಗೆ ಚರ್ಚೆ ಮಾಡಿದ್ದಾರೆ. ಆದ್ದರಿಂದ ಗ್ರಂಥ ಸಂಪಾದನೆ ಮಾಡಬೇಕಾದರೆ ಸಂದೇಹ ಬಂದ ಕಡೆ ವಿದ್ವಾಂಸರೊಡನೆ ಚರ್ಚಿಸಿದ್ದಾರೆ. ಇದಕ್ಕಾಗಿ ಇತರ ಭಾಷಾ ವಿಧ್ವಾಂಸರ ಜೊತೆ ಸಮಾಲೋಚನೆ ಮಾಡಿದ್ದಾರೆ.

(ಆ) ಛಂದಸ್ಸಿನ ವಿಚಾರ

ಆದಿಪುರಾಣ ಚಂಪೂಕಾವ್ಯವಾಗಿದ್ದರೂ ಖ್ಯಾತ ಕರ್ನಾಟಕಗಳಲ್ಲದೆ ಪಿರಿಯಕ್ಕರ, ಲಲಿತರಗಳೆ, ಪೃಥ್ವಿರಗಳೆ, ಮಾಲಿನಿ ರಗಳೆ ಮೊದಲಾದ ಛಂದಸ್ಸುಗಳನ್ನು ಪೀಠಿಕೆಯಲ್ಲಿ ಗುರುತಿಸಲಾಗಿದೆ. ಆದ್ದರಿಂದ ಛಂದಸ್ಸಿನ ಲಕ್ಷಣಗಳನ್ನು ಕೊಟ್ಟಿರುವುದು ಕಾವ್ಯಾಭಿಮಾನಿಗಳಿಗೆ ಉಪಯೋಗವಾಗುತ್ತದೆ. ಸಂಗ್ರಹದಲ್ಲಿ ಬಂದ ಎಲ್ಲ ಛಂದೋರೂಪಗಳನ್ನು ಲಕ್ಷಣಗಳನ್ನು ಸೋದಾಹರಣವಾಗಿ ವಿವರಿಸಿದ್ದಾರೆ.

4. ಅನುಬಂಧಗಳ ವೈಶಿಷ್ಟ್ಯ

ಆದಿಪುರಾಣದ ಸಂಗ್ರಹದ ಕೊನೆಯಲ್ಲಿ ವಿಶೇಷ ಪದಗಳಿಗೆ ಟಿಪ್ಪಣಿ ಮತ್ತು ಅರ್ಥಕೋಶವನ್ನು ಕೊಟ್ಟಿದ್ದಾರೆ. ಅರ್ಥಕೋಶದ ಅನುಬಂಧದಲ್ಲಿ ಪದಗಳಿಗೆ ಕೆಲವೆಡೆ ಅರ್ಥಕೊಡಲಾಗಿದೆ. ಧರ್ಮ:ಪುಟ 116, ಟಿಪ್ಪಣಿಗಳು) ಕೆಲವೆಡೆ ಟಿಪ್ಪಣಿ ಕೊಟ್ಟಿದ್ದಾರೆ. ಉದಾಹರಣೆಗೆ ನಂದೀಶ್ವರ ಪದ್ಯ ಪದವನ್ನು ಗಮನಿಸಬಹುದು. (ಪುಟ 116) ಸಾಮಾನ್ಯ ಪದಗಳಿಗೂ, ಪಾರಿಭಾಷಿಕ ಪದಗಳಿಗೂ ಎರಡಕ್ಕೂ ಅರ್ಥ ಕೊಡಲಾಗಿದೆ. ಉದಾ: ಜ್ಞಾನ ಚತುಷ್ಟಯ (ಉ. 115) ಪದದ ಅರ್ಥವನ್ನು ಗಮನಿಸಬಹುದು.

ಹೀಗೆ ಟಿಪ್ಪಣಿ ವಿಭಾಗದಲ್ಲಿ ಸಾಮಾನ್ಯ ಅರ್ಥಕೋಶ ಮತ್ತು ಪಾರಿಭಾಷಿಕ ಅರ್ಥಕೋಶ ಮತ್ತು ಟಿಪ್ಪಣಿಗಳು ಈ ಮೂರೂ ಸೇರ್ಪಡೆಯಾಗಿದೆ. ಇದಲ್ಲದೆ ಕಾವ್ಯದಲ್ಲಿ ಪ್ರಯೋಗವಾದ ಸಾಮಾನ್ಯ ಪದಗಳ ನೇರಾರ್ಥವನ್ನು ಅರ್ಥಕೋಶದಲ್ಲಿ ಕೊಟ್ಟಿದ್ದಾರೆ. ಸಾಮಾನ್ಯ ಪದಗಳೇ ಆದರೂ ಜೈನಧರ್ಮದ ಹಿನ್ನೆಲೆಯಲ್ಲಿ ಪಾರಿಭಾಷಿಕ ಅರ್ಥದ ಛಾಯೆಯನ್ನು ಒಳಗೊಂಡಾಗ ಅಂತಹ ಪದಗಳನ್ನು ಟಿಪ್ಪಣಿಗಳಲ್ಲೇ ಸಮಾವೇಶ ಮಾಡಿದ್ದಾರೆ.

ಉದಾ: ತಪಂ (ಪು. 115) ಎಂದರೆ ತಪಸ್ಸು. ಇದೊಂದು ಸಾಮಾನ್ಯ ಅರ್ಥ. ಆದರೆ ಜೈನಧರ್ಮದಲ್ಲಿ ವಿಶೇಷ ಅರ್ಥವಾಗುತ್ತದೆ. ಆದ್ದರಿಂದ ತಪಂ ಎನ್ನುವ ಪದವನ್ನು ಅರ್ಥಕೋಶದಲ್ಲಿ ಕೊಟ್ಟಿಲ್ಲ. ಪಾರಿಭಾಷಿಕ ಅರ್ಥವಿವರಣೆಯಲ್ಲಿ ಹೇಳಿದ್ದಾರೆ.

ಪೀಠಿಕೆಯಲ್ಲಿ ಜೈನದರ್ಮದ ಪರಿಕಲ್ಪನೆಗಳನ್ನು ವಿವರಿಸಿರುವುದನ್ನು ಟಿಪ್ಪಣಿ ಪದಗಳಲ್ಲಿ ಸೂಚಿಸಲಾಗಿದೆ. ಉ.ದಾ: ಆಸ್ರವ 275 ವ॥ ಒಂದು ತತ್ತ್ವ (ಪು.93). ಇಲ್ಲಿ ಪದಪ್ರಯೋಗವಾಗಿರುವ ಪದ್ಯಭಾಗವನ್ನು ಸೂಚಿಸಿದ್ದಾರೆ. ಒಂದು ತತ್ತ್ವ ಎನ್ನುವುದು ಸಾಮಾನ್ಯ ಅರ್ಥವನ್ನು ಸೂಚಿಸುತ್ತದೆ. ಆದರೆ ಪು. 154 ಎಂಬ ಸೂಚನೆ ಪೀಠಿಕೆಯಲ್ಲಿ ಅಸ್ರವತತ್ತ್ವವನ್ನು ವಿವರಿಸುವುದನ್ನು ಸೂಚಿಸುತ್ತಿದೆ.

ಜೊತೆಗೆ ಟಿಪ್ಪಣಿ ಪದ, ಪ್ರಯೋಗವಾದ ಸಂಖ್ಯೆ, ಪಾರಿಭಾಷಿಕ ವಿವರಣೆ ಕೊಡುವಲ್ಲಿ ಪೀಠಿಕಾ ಭಾಗದಲ್ಲಿ ಇಲ್ಲದ ಅರ್ಥವನ್ನು ಕೊಟ್ಟಿದ್ದಾರೆ. ಟಿಪ್ಪಣಿಯ ಕೊನೆಯ ಭಾಗದಲ್ಲಿ ಕೆಲವು ಸಂಸ್ಕೃತ ಮಾತುಗಳ ಅರ್ಥ ವಿವರಣೆಯನ್ನು ಕೊಟ್ಟಿದ್ದಾರೆ.

ಉದಾ: ನಮಃ ಸಿದ್ಧೇಭ್ಯಃ 222 ಸಿದ್ಧರಿಗೆ ನಮಸ್ಕಾರ (ಪು.121)

5. ಸಂಗ್ರಹ ವಿನ್ಯಾಸ: ಶೀರ್ಷಿಕೆಗಳು

ಆದಿಪುರಾಣವು ಮೂಲದಲ್ಲಿ 16 ಆಶ್ವಾಸಗಳನ್ನು ಹೊಂದಿದೆ. ಆದರೆ ಎಲ್. ಗುಂಡಪ್ಪನವರು ಇಡೀ ಕೃತಿಯನ್ನು 3 ಪ್ರಧಾನ ಭಾಗಗಳಾಗಿ ವಿಂಗಡಿಸಿ ಹೆಸರಿಸಿದ್ದಾರೆ. ಪ್ರತಿಯೊಂದು ವಿಭಾಗದಲ್ಲಿ ಕಥೆಯ ಹಿನ್ನೆಲೆಯಲ್ಲಿ ಉಪಶೀರ್ಷಿಕೆಗಳನ್ನು ನೀಡಿದ್ದಾರೆ. ಈ ಶೀರ್ಷಿಕೆಯನ್ನು ಅವಲೋಕಿಸಿದರೆ ಇಡೀ ಕೃತಿಯ ಸಮಗ್ರ ಪರಿಚಯದ ಸಕಲ ದರ್ಶನವಾಗುತ್ತದೆ. ಅವುಗಳು ಈ ರೀತಿ ಇವೆ.

ಒಳಪಿಡಿ

ಮುನ್ನುಡಿ

ನೆನೆವರಿಕೆ

ಆದಿಪುರಾಣ ಸಂಗ್ರಹ

ಪೀಠಿಕೆ

1. ಕವಿಪರಿಚಯ
2. ಜೈನಧರ್ಮ
3. ಜೈನಪುರಾಣಗಳು
4. ಆದಿಪುರಾಣ
5. ಪಂಪನ ಪುರಾಣ ಮಾರ್ಗ

ಅನುಬಂಧಗಳು

1. ಆದಿಪುರಾಣಂ (ಮೂಲ ಗದ್ಯಾನುವಾದ)
   ಸಂ : ಕೆ.ಎಲ್.ಎನ್. ನರಸಿಂಹಶಾಸ್ತ್ರಿ (2004)
   ಪ್ರ : ಕನ್ನಡ ಸಾಹಿತ್ಯ ಪರಿಷತ್ತು
2. ಜೈನ ಪಾರಿಭಾಷಿಕ ಪದವಿವರ ಕೋಶ (2006)
   ಲೇ : ಸರಸ್ವತಿ ವಿಜ0ಉಕುಮಾರ್ ಮತ್ತು ಬಾ.ವೇ. ಶ್ರೀಧರ
   ಪ್ರ : ಮೈಸೂರು ವಿಶ್ವವಿದ್ಯಾಲ0ಉ
3. ಪಂಪನ ಆದಿಪುರಾಣ ಕಥಾಮೃತ (2003)
   ಸಂ : ಎಲ್. ಬಸವರಾಜು (ಗದ್ಯಾನುವಾದ)
   ಪ್ರ : ಮೈಸೂರು
4. ಕನ್ನಡ ಗ್ರಂಥ ಸಂಪಾದನೆ (2005)
   ಲೇ : ಡಿ.ಎಲ್. ನರಸಿಂಹಾಚಾರ್
   ಪ್ರ : ಡಿ.ವಿ.ಕೆ. ಮೂರ್ತಿ, ಮೈಸೂರು 4
5. ಭಾರತೀ0ಉ ಗ್ರಂಥ ಸಂಪಾದನಾ ಪರಿಚ0ಉ (1968)
   ಅನುವಾದ : ಎನ್.ಎಸ್. ಲಕ್ಷ್ಮೀನಾರಾ0ಉಣ ಭಟ್ಟ